**ಸಾಕ್ಷಿಯನ್ನು ದಿಃ 23.02.2024 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು**

**ಮಧ್ಯಂತರ ಅರ್ಜಿಯಲ್ಲಿನ ಆದೇಶದನ್ವಯ ಮುಂದುವರೆದ ಮುಖ್ಯ ವಿಚಾರಣೆಃ**

**ಅರ್ಜಿದಾರರ ಪರ ಶ್ರೀ ಎ ಜಿ ಟಿ ಎಂ ವಕೀಲರಿಂದಃ**

ಈ ದಿನ ನಾನು ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ಪ್ರಥಮ ವರ್ತಮಾನ ವರದಿಯ ಯಥಾ ನಕಲನ್ನು ನಿಪಿ. 1 ಎಂದು, ದೂರಿನ ಯಥಾ ನಕಲನ್ನು ನಿಪಿ. 2 ಎಂದು, ಸ್ಥಳ ಪಂಚನಾಮೆಯ ಯಥಾ ನಕಲನ್ನು ನಿಪಿ. 3 ಎಂದು, ಅಮಾನತ್ತು ಮಹಜರಿನ ಯಥಾ ನಕಲನ್ನು ನಿಪಿ. 4 ಎಂದು, ಎಂವಿಎ ವರದಿಯ ಯಥಾ ನಕಲನ್ನು ನಿಪಿ. 5 ಎಂದು, ಗಾಯದ ಪ್ರಮಾಣ ಪತ್ರದ ಯಥಾ ನಕಲನ್ನು ನಿಪಿ. 6 ಎಂದು, ಅಂತಿಮ ದೋಷಾರೋಪಣಾ ಪಟ್ಟಿಯ ಯಥಾ ನಕಲನ್ನು ನಿಪಿ. 7 ಎಂದು, ಆಧಾರ್ ಕಾರ್ಡ ಮತ್ತು ಪಾನ್ ಕಾರ್ಡ ನ ನೋಟರೈಸ್ಡ್ ಪ್ರತಿಗಳನ್ನು ಹಾಜರುಪಡಿಸಿದ್ದು, ಅವುಗಳ ಮೂಲ ದಾಖಲೆಗಳೊಂದಿಗೆ ಹೋಲಿಕೆ ಮಾಡಿ ನೋಡಿ ಸರಿ ಇರುವುದು ಕಂಡು ಬಂದಿರುವುದರಿಂದ ನಿಪಿ. 8 ಮತ್ತು 9 ಎಂದು, ಒಂದು ಬಿಡುಗಡೆ ಸಾರಾಂಶವನ್ನು ನಿಪಿ. 10 ಎಂದು, ಕ್ರಮ ಸಂಖ್ಯೆ 1 ರಿಂದ 8 ವರೆಗಿನ ರೂ.7,313/- ಮೊತ್ತದ ಮೆಡಿಕಲ್ ಬಿಲ್ ಗಳನ್ನು ಒಟ್ಟಾಗಿ ನಿಪಿ. 11 ಎಂದು ಗುರುತಿಸಲಾಯಿತು. ಆದುದರಿಂದ ನಾನು ಕೋರಿರುವಂತೆ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಪ್ರಾರ್ಥಿಸುತ್ತೇನೆ.

(ನಿಪಿ. 8 ಮತ್ತು 9 ರ ಮೂಲ ದಾಖಲೆಗಳನ್ನು ಪರಿಶೀಲಿಸಿ ಸಾಕ್ಷಿಗೆ ಹಿಂದಿರುಗಿಸಲಾಯಿತು)

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀಮತಿ ಕೆ ಎಲ್ ಎಸ್ ವಕೀಲರಿಂದಃ**

ಸಮಯಾವಕಾಶವನ್ನು ಕೋರಿದ್ದು ನೀಡಲಾಯಿತು.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಪ್ರಧಾನ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.